(ಇಂದು ದಿನಾಂಕಃ 18–12–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಹೆಚ್ ಎಸ್ ಡಿ ವಕೀಲರಿಂದ ಃ -

1) ವಿವಾಹದ ನಂತರ ಅರ್ಜಿದಾರರು ನನ್ನ ಸಂಗಡ ಜೀವನ ಸಾಗಿಸಲು ಬಂದಿರುತ್ತಾರೆ. ನಾನು ಸುಮಾರು 6 ತಿಂಗಳ ಕಾಲ ಆಕೆ ಸಂಗಡ ಜೀವನ ಸಾಗಿಸಿರುತ್ತೇನೆ. 6 ತಿಂಗಳ ಕಾಲ ಚೆನ್ನಾಗಿ ಇದ್ದೆವು ಎಂದರೆ ಸರಿ. ನಮ್ಮ ವಿವಾಹವು ಹೊಸುರು ಗ್ರಾಮದಲ್ಲಿ ಮನೆಯ ಎದುರು ಆಗಿರುತ್ತದೆ ಎಂದರೆ ಸರಿ. ನಾವು ಅಲ್ಲಿಯೆ ವಾಸವಿರುತ್ತೇವೆ ಎಂದರೆ ಸರಿ. ಸದರಿ ಹೊಲವು ಊರಿನಿಂದ 2 ರಿಂದ 3 ಕೀ.ಮೀ. ದೂರದಲ್ಲಿರುತ್ತದೆ ಅಂದರೆ ಸರಿಯಲ್ಲ. ಅರ್ದ ಕೀಲೋಮೀಟರ ಇರಬಹುದು.

2) ವಿವಾಹದ ಸಮಯದಲ್ಲಿ ಅರ್ಜಿದಾರರು ನನಗೆ ಬಟ್ಟೆ ಉಪಚಾರವೆಂದು 25 ಸಾವಿರ ರೂಪಾಯಿ ನಗದು ಹಾಗೂ ಬಾಂಡೆ ಸಾಮಾನು ನೀಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಜೀವನ ಸಾಗಿಸುವ ಸಮಯದಲ್ಲಿ ಅರ್ಜಿದಾರರ ಅಜ್ಜಿಗೆ ಅನಾರೋಗ್ಯವಿದ್ದ ಕಾರಣ ನಾವಿಬ್ಬರೂ ಅವರನ್ನು ನೋಡಲು ಬಂದಿರುತ್ತೇವೆ ಎಂದರೆ ಸರಿ. ಅಲ್ಲಿಂದ ಇಬ್ಬರೂ ಕೂಡಿ ನನ್ನ ಮನೆಗೆ ಬಂದಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿ ಃ 27-11-2019 ರಂದು ಹೋದ ದಿನದಂದೇ ನಾನು ಒಬ್ಬನೇ ಮರಳಿ ನನ್ನ ಮನೆಗೆ ಬಂದಿರುತ್ತೇನೆ. ಅರ್ಜಿದಾರರ ಅಜ್ಜಿಯನ್ನು ನೋಡಿಕೊಳ್ಳಲು ಯಾರು ಇರುವುದಿಲ್ಲ ಬಂದ ಜನರಿಗೆ ಉಪಚಾರ ಮಾಡಬೇಕು ಆದಕಾರಣ ಅರ್ಜಿದಾರರು ಅಲ್ಲಿಯ ಇರುತ್ತಾರೆ.

3) ಅರ್ಜಿದಾರರಿಗೆ ಮರಳಿ ಬರಲು ನಾನು ದೂರವಾಣಿ ಕರೆ ಮಾಡಿರುತ್ತೇನೆ ಅವರ ತಂದೆತಾಯಿ ಸಹ ಹೇಳಿರುತ್ತಾರೆ ಆದರೆ ಅವರು ಬಂದಿರುವುದಿಲ್ಲ. ನಾನು ಕರೆಯಲು ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಹಿರಿಯರನ್ನು ಕರೆದುಕೊಂಡು ಹೋಗಿರುತ್ತೇನೆ ಆಗ ಅರ್ಜಿದಾರರು ಬಂದಿರುತ್ತಾರೆ. ಆಗ ಅರ್ಜಿದಾರರಿಗೆ ಮನೆಗೆ ಕರೆದುಕೊಂಡು ಜೀವನ ಸಾಗಿಸಿರುತ್ತೇನೆ. ಆ ಸಮಯದಲ್ಲಿ ಚೆನ್ನಾಗಿ ಜೀವನ ಸಾಗಿಸಿರುತ್ತೇವೆ ಎಂದರೆ ಸಾಕ್ಷಿಯು ಕೇವಲ ಒಂದು ವಾರದ ಕಾಲ ಮಾತ್ರ ಎಂದು ನುಡಿಯುತ್ತಾರೆ. ಮುಂದೆ ಚೆನ್ನಾಗಿ ಇರಲಿಲ್ಲ ಕಾರಣ ಅರ್ಜಿದಾರರು ಪ್ರತ್ಯಕ ಮನೆ

ಮಾಡಿಕೊಡಲು ನನಗೆ ಒತ್ತಾಯ ಮಾಡುತ್ತಿದ್ದರು. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

4) ನಾನು ಅರ್ಜಿದಾರರಿಗೆ ದಿನನಿತ್ಯ ಕುಡಿದು ಬಂದು ವರದಕ್ಷಣೆ ವರೋಪಚಾರ ಕೋರಿ ಇನ್ನು 50 ಸಾವಿರ ರೂಪಾಯಿ ನಗದು ಹಣವನ್ನು ತಂದು ಕೊಡಲು ಒತ್ತಾಯ ಮಾಡಿ ದಿನನಿತ್ಯ ಹೊಡಿ ಬಡಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆಗ ಅರ್ಜಿದಾರರು ವಿವಾಹದ ಸಮಯದಲ್ಲಿ ಸಾಕಷ್ಟು ಹಣ ನೀಡಿರುತ್ತೇನೆ ಎಂದು ಕೋರಿಕೊಂಡರು ಸಹ ನಾನು ಅವರಿಗೆ ತೊಂದರೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೊಡಿಬಡಿ ಮಾಡಿ ಅರ್ಜಿದಾರರು ಕೂಗುತ್ತಿದ್ದ ಸಮಯದಲ್ಲಿ ಮತ್ತೆ ಕೂಗಿದರೆ ಹೊಡೆಯುತ್ತೇನೆ ಎಂದು ಉಪವಾಸ ಇಟ್ಟಿರುತ್ತೇನೆ ಅಂದರೆ ಸರಿಯಲ್ಲ. ಸದರಿ ಕೃತ್ಯಕ್ಕೆ ನನ್ನ ತಂದೆ ತಾಯಿ ಹಾಗೂ ಸಹೋದರ-ಸಹೋದರಿಯರು ಪ್ರಚೋದನೆ ನೀಡುತ್ತಿದ್ದರು ಅಂದರೆ ಸರಿಯಲ್ಲ. ಆದರೂ ಸಹ ಅರ್ಜಿದಾರರು ಎಲ್ಲಾವನ್ನು ಸಹಿಸಿಕೊಂಡು ಅಲ್ಲಿಯೇ ವಾಸವಿದ್ದರು ಅಂದರೆ ಸರಿಯಲ್ಲ.

5) ಅರ್ಜಿದಾರರನ್ನು ನಾವು ಎಲ್ಲರೂ ಸೇರಿ ಅವರ ಬಂಗಾರ ಒಡುವೆಗಳನ್ನು ಕಸಿದುಕೊಂಡು ಮನೆಯಿಂದ ಹೊರಹಾಕಿರುತ್ತೇವೆ ಅಂದರೆ ಸರಿಯಲ್ಲ. ಆದಕಾರಣ ಅರ್ಜಿದಾರರು ತಮ್ಮ ತವರೂ ಮನೆಗೆ ಬಂದಿರುತ್ತಾರೆ ಅಂದರೆ ಸರಿಯಲ್ಲ. ತವರೂ ಮನೆಯಿಂದ ಅರ್ಜಿದಾರರು ತಮ್ಮ ಊರಿನ ಹಿರಿಯರನ್ನು ಕರೆದುಕೊಂಡು ಬಂದು ನನಗೆ ಬುದ್ಧಿಮಾತನ್ನು ಹೇಳಿ ಅರ್ಜಿದಾರರನ್ನು ನನ್ನ ಸಂಗಡ ಬಿಟ್ಟು ಹೋಗಿರುತ್ತಾರೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹೊಸುರು ಗ್ರಾಮದಲ್ಲಿ ಬೇರೆ ಮನೆ ಮಾಡಿ ಇದ್ದೆನು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಹಿರಿಯರನ್ನು ಕರೆದುಕೊಂಡು ಅರ್ಜಿದಾರರ ಮನೆಗೆ ಹೋದ ಸಮಯದಲ್ಲಿ ಅವರು ಪ್ರತ್ಯಕ ಮನೆ ಮಾಡಲು ಹೇಳಿದ ಕಾರಣ ನಾನು ಹೊಸುರುನಲ್ಲಿ ಮನೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

6) ಹೊಸರು ಮನೆಯಲ್ಲಿ ನಾನು ಹಾಗೂ ಅರ್ಜಿದಾರರು ಒಟ್ಟಿಗೆ ಇದ್ದೆವು ಎಂದರೆ ಸರಿ. ಅಲ್ಲಿಯೂ ಸಹ ನಾನು ಕುಡಿದು ಅರ್ಜಿದಾರರಿಗೆ ಹೊಡಿಬಡಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಐಟಿಐ ಮೆಕ್ಯಾನಿಕಲ್ ಪದವಿ ಹೊಂದಿರುತ್ತೇನೆ. ಸದರಿ ಅರ್ಹತೆಯ ಮೇಲೆ ನಾನು ನಂದಿ ಸಕ್ಕರೆ ಪ್ಯಾಕ್ಟರಿಯಲ್ಲಿ ಕೆಲಸಕ್ಕೆ ಇರುತ್ತೇನೆ ಎಂದರೆ ಸರಿ. ಕೆಲಸಕ್ಕೆ ದಿನ ಮನೆಯಿಂದ

ಓಡಾಟ ಮಾಡುತ್ತೇನೆ ಎಂದರೆ ಸರಿ. ನನಗೆ ತಿಂಗಳಿಗೆ 35 ರಿಂದ 45 ಸಾವಿರ ರೂಪಾಯಿ ಸಂಬಳ ಬರುತ್ತದೆ ಅಂದರೆ ಸರಿಯಲ್ಲ. ನನಗೆ ತಿಂಗಳಿಗೆ 8 ಸಾವಿರ ರೂಪಾಯಿ ಸಂಬಳ ಇರುತ್ತದೆ. ನಾನು ನನ್ನ ವೇತನ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ ಕಾರಣ ನಾನು ದಿನಕೂಲಿ ಕೆಲಸಕ್ಕೆ ಇರುತ್ತೇನೆ ಆದರೆ ದಾಖಲೆ ಹಾಜರು ಪಡಿಸುತ್ತೇನೆ. ಕಳೆದು 10-15 ವರ್ಷಗಳಿಂದ ದಿನಕೂಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ.

7) ನಾನು ಫ್ಯಾಕ್ಟರಿಯಲ್ಲಿ ಖಾಯಂ ತರಿಕವಾಗಿ ಮೆಕ್ಯಾನಿಕ ಆಗಿ ಕೆಲಸ ಮಾಡಿ ಅದರಿಂದ ತಿಂಗಳಿಗೆ 35 ರಿಂದ 45 ಸಾವಿರ ರೂಪಾಯಿ ಸಂಬಳ ಇದ್ದರು ಸಹ ದಿನಕೂಲಿ ಮಾಡುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು ಸಂಶಯಸ್ಪದ ರೀತಿಯಲ್ಲಿ ನೋಡುತ್ತಿದ್ದೇನು ಅಂದರೆ ಸರಿಯಲ್ಲ. ಅರ್ಜಿದಾರರು ತಮ್ಮ ಕುಟುಂಬದವರಿಗೆ ದೂರವಾಣಿ ಕರೆ ಮಾಡಿದರು ಸಹ ಅವರ ಮೇಲೆ ಅನುಮಾನ ಪಟ್ಟು ಹೊಡಿ ಬಡಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿ ಅರ್ಜಿದಾರರನ್ನು ಮನೆಯಲ್ಲಿಯೆ ಕೂಡಿಟ್ಟು ಹೋಗುತ್ತಿದ್ದೆ ಅಂದರೆ ಸರಿಯಲ್ಲ.

8) ಅರ್ಜಿದಾರರು ಸದರಿ ಕಿರುಕುಳವನ್ನು ಸಹಿಸಲಾರದೇ ಜೀವ ಭಯದಿಂದ ಪುನಃ ತನ್ನ ತವರೂ ಮನೆಗೆ ಬಂದಿರುತ್ತಾಳೆ ಅಂದರೆ ಸರಿಯಲ್ಲ. ಅರ್ಜಿದಾರರು ತವರೂ ಮನೆಗೆ ಹೋಗಿ ಈಗ 6 ನೇ ವರ್ಷ ಚಾಲ್ತಿಯಲ್ಲಿ ಇರುತ್ತದೆ. ಸದರಿ ಸಮಯದಲ್ಲಿ ನಾನು ಅರ್ಜಿದಾರರನ್ನು ಕರೆಯಲು ಹೋಗಿರುವುದಿಲ್ಲ. ಅರ್ಜಿದಾರರಿಗೆ ನಾನು ಯಾವುದೇ ಜೀವನಾಂಶ ನೀಡಿಲ್ಲ ಕಾರಣ ಅವರು ನನ್ನ ಸಂಗಡ ಬಂದು ವಾಸ ಮಾಡುತ್ತಿಲ್ಲ. ನಾನೇ ಸ್ವತಃ ಅರ್ಜಿದಾರರನ್ನು ಅಲಕ್ಷ ಮಾಡಿದ ಕಾರಣ ನಾನು ಅವರಿಗೆ ಜೀವನಾಂಶ ನೀಡಬೇಕಾಗುತ್ತದೆ ಅಂದರೆ ಸರಿಯಲ್ಲ.

9) ಇದೇ ಕಾರಣದಿಂದ ನಾನು ಬೇರೊಂದು ವಿವಾಹವಾಗುವ ಪ್ರಯತ್ನ ಪಡುತ್ತಿದ್ದೇನೆ ಅಂದರೆ ಸರಿಯಲ್ಲ. ಇದೇ ಕಾರಣದಿಂದ ನಾನು ಅರ್ಜಿದಾರರಿಗೆ ನೋಟಿಸ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ನೋಟಿಸಗೆ ಅರ್ಜಿದಾರಳು ಉತ್ತರ ನೋಟಿಸ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರಳ ಉತ್ತರ ನೋಟಿಸನಲ್ಲಿ ಆಕೆಗೆ ಜೀವದ ಭಯವಿರುತ್ತದೆ ಅದನ್ನು ಸರಿಪಡಿಸಿ ಭದ್ರತೆ ನೀಡಿದರೆ ಮಾತ್ರ ಜೀವನ ಸಾಗಿಸುತ್ತೇನೆ ಎಂದು ನೋಟಿಸ ನೀಡಿರುತ್ತಾರೆ ಅಂದರೆ ಸರಿಯಲ್ಲ. ಆದಕಾರಣ ನಾನು ಮಾನ್ಯ ವಿಜಯಪುರ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನೆ ಕೋರಿ ಅರ್ಜಿ

ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ವಿವಾಹ ಪುನಃರಸ್ಥಾಪನೆಗೆ ಸಲ್ಲಿಸಿರುತ್ತೇನೆ. ಅದರಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ ಅಂದರೆ ಸರಿಯಲ್ಲ.

10) ಮಾನ್ಯ ಕೌಟಂಬಿಕ ನ್ಯಾಯಾಲಯದಲ್ಲಿ ಆದೇಶವಾದ ನಂತರ ನಾನು ಅರ್ಜಿದಾರರನ್ನು ಕರೆಯಲು ಹೋಗಿರುವುದಿಲ್ಲ ಕಾರಣ ಆದೇಶ ಅವರಿಗೆ ಬರಲು ಇರುತ್ತದೆ ನಾನು ಏಕೆ ಹೋಗಬೇಕು ಎಂದು ಮರುಪ್ರಶ್ನೆ ಮಾಡುತ್ತಾರೆ. ಆದೇಶವಾದ ಬಗ್ಗೆ ಅರ್ಜಿದಾರರಿಗೆ ಗೊತ್ತಿಲ್ಲದೇ ಇದ್ದ ಕಾರಣ ಆದೇಶ ಪಡೆದ ನಾನು ಅರ್ಜಿದಾರರನ್ನು ಕರೆಯಲು ಹೋಗಬಹುದಿತ್ತು ಅಂದರೆ ಸರಿಯಲ್ಲ. ಕರೆಯಲು ನನಗೆ ತೊಂದರೆ ಇತ್ತು ಕಾರಣ ಹೊಲ, ವಯಸ್ಸಾದ ತಂದೆ ತಾಯಿ ಹಾಗೂ ಕೆಲಸ ಇರುತ್ತದೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

11) ನಾನು ವಿವಾಹ ವಿಚ್ಛೇದನೆ ಪಡೆದು ಬೇರೊಂದು ವಿವಾಹ ಆಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಇಂದಿಗೂ ಸಹ ನಾನು ಅರ್ಜಿದಾರರೊಂದಿಗೆ ಜೀವನ ಸಾಗಿಸಲು ಸಿದ್ಧನಿರುತ್ತೇನೆ. ನಾನು ಮಾನ್ಯ ವಿಜಯಪುರ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಬೇರೊಂದು ವಿವಾಹ ಆಗಲು ಸದರಿ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಅರ್ಜಿದಾರರಿಗೆ ಜೀವದ ಭಯವಿರುತ್ತದೆ ಭದ್ರತೆಯ ಭರವಸೆ ನೀಡಿ ಕರೆದುಕೊಂಡು ಹೋಗಲು ತಿಳಿಸಿ ನನಗೆ ನೋಟಿಸ ನೀಡಿದರೂ ಸಹ ನಾನು ಇನ್ನೊಂದು ವಿವಾಹ ಆಗುವ ಉದ್ದೇಶದಿಂದ ವಿವಾಹ ವಿಚ್ಛೇದನೆ ಅರ್ಜಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

12) ನವಲಗುಂದದಿಂದ ವಿಜಯಪುರ 200-250 ಕೀಲೋಮೀಟರ ಆಗುತ್ತದೆ ಅಂದರೆ ಸರಿಯಲ್ಲ. 150 ಕೀ.ಮೀ. ಆಗುತ್ತದೆ. ಬಸ್ಸಿನಲ್ಲಿ ಸುಮಾರು 3 ಗಂಟೆಯ ಪ್ರಯಾಣವಿರುತ್ತದೆ. ಜಾವೂರುದಿಂದ ನವಲಗುಂದ ಎಷ್ಟು ದೂರವಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಲ್ಲಿಂದ ಬಂದಿರುವುದಿಲ್ಲ. ಹಿರಿಯರ ಸಂಗಡ ಜಾವೂರುಗೆ ಸೌದತ್ತಿ ಮಾರ್ಗವಾಗಿ ಬಂದಿರುತ್ತೇನೆ. ವಿಜಯಪುರದಿಂದ ಸೌದತ್ತಿ ಮಾರ್ಗವಾಗಿ ಮೂರುವರೆ ಗಂಟೆಯ ಪ್ರಯಾಣವಿರುತ್ತದೆ.

13) ಬಬಲೇಶ್ವರ ತಾಲೂಕನಲ್ಲಿ ನನ್ನ ತಂದೆಗೆ ಸೇರಿದ ಸ್ಥಿರಾಸ್ತಿ ಇರುತ್ತದೆ ಎಂದರೆ ಸರಿ. ಅಲ್ಲಿ ಕೃಷ್ಣಾ ನದಿ ಹರಿಯುತ್ತದೆ ಎಂದರೆ ಸರಿ. ಕೃಷ್ಣಾನದಿ ಪ್ರವಾಹದಿಂದ ನಮ್ಮ ಸ್ವಲ್ಪ ಆಸ್ತಿ ಮುಲಗಿರುತ್ತದೆ ಎಂದರೆ ಸರಿ. ಅದರ ಪರಿಹಾರ ಪಡೆದಿರುತ್ತೇವೆ ಎಂದರೆ ಸರಿ. ಉಳಿದ ಜಮೀನಿನಲ್ಲಿ ಮಾವು, ತೆಂಗು ಹಾಗೂ ಕಬ್ಬು ಬೆಳೆ ಬೆಳೆಯುತ್ತಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಮೆಕ್ಕೆಜೋಳ ಹಾಗೂ ಕಡಲಿ ಬೆಳೆ, ಹಾಗೂ ಶೆಂಗಾ ಬೆಳೆಯುತ್ತೇವೆ.

14) ಸಾಕ್ಷಿಗೆ ಈಗ ನಿಪಿ-7 ನ್ನು ತೋರಿಸಿ ಅದರಲ್ಲಿ ಸಾಕ್ಷಿಯು ಕಬ್ಬು ನಮೂದು ಇರುತ್ತೇದೆ ಕಾರಣ ನಾನು ಸಾಲದ ಸಂಬಂದ ಅರ್ಜಿ ಕೊಟ್ಟು ನಮೂದು ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಭೂಮಿಯಲ್ಲಿ ಬೆಳೆಯುವ ಬೆಳೆಯ ಬಗ್ಗೆ ಮಾತ್ರ ಉತಾರನಲ್ಲಿ ನಮೂದು ಇರುತ್ತದೆ ಅಂದರೆ ಸರಿಯಲ್ಲ.  ನನ್ನ ಹೊಲದಲ್ಲಿ ಮಾವು, ತೆಂಗು ಹಾಗೂ ಕಬ್ಬು ಬೆಳೆ ಬೆಳೆಯುತ್ತಿದ್ದು ಅದರಿಂದ 30 ರಿಂದ 35 ಲಕ್ಷ ವಾರ್ಷಿಕ ಉತ್ಪನ್ನ ಬರುತ್ತಿದ್ದರು ಸಹ ಜೀವನಾಂಶ ನೀಡಬೇಕಾಗುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

15) ಅರ್ಜಿದಾರರು ಬಡವಳು ಇದ್ದು ದುಡಿದು ಜೀವನ ಸಾಗಿಸುತ್ತಿದ್ದಾರೆ ಅಂದರೆ ಸರಿಯಲ್ಲ. ಅರ್ಜಿದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಹಾಗೂ ಜೀವನಾಂಶ ನೀಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಆದಾಯದ ಮೂಲಗಳು ಇದ್ದು ಅರ್ಜಿದಾರರಿಗೆ ಪ್ರತಿ ತಿಂಗಳ 20 ಸಾವಿರ ರೂಪಾಯಿಗಳ ಜೀವನಾಂಶ ನೀಡಬೇಕು ಅಂದರೆ ಸರಿಯಲ್ಲ. ನನಗೆ ಜೀವನಾಂಶ ನೀಡುವ ಸಾಮರ್ಥ್ಯತೆ ಇದ್ದು ಅದನ್ನು ತಪ್ಪಿಸಲು  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**